# 2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕನಕಪುರ

## ಸಿ.ಸಿ. 990/2012

**ಫಿರ್ಯಾದಿ** ः ರಾಜ್ಯ ಸರ್ಕಾರದ ಪರವಾಗಿ ಕನಕಪುರ ಗ್ರಾಮಾಂತರ
ಪೋಲೀಸ್ ಠಾಣೆ.

**-ವಿರುದ್ಧ-**

**ಆರೋಪಿತರು** ः

1. ಹರೀಶ ಉಃ ತಿಮ್ಮೇಗೌಡ
ಬಿನ್ ಪುಟ್ಟಸ್ವಾಮಿ,
22 ವರ್ಷ ವಯಸ್ಸು,
ವಾಸಃ ಅಂಚಿಪುರದೊಡ್ಡಿ ಗ್ರಾಮ,
ಉಯ್ಯಂಬಳ್ಳಿ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

2. ಅಶೋಕ ಬಿನ್ ಮೋಟಯ್ಯ,
21 ವರ್ಷ ವಯಸ್ಸು,
ವಾಸಃ ಕಚುವನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

3. ಸಂದೀಪ ಉಃ ದೀಪು ಬಿನ್ ರಾಜು,
19 ವರ್ಷ ವಯಸ್ಸು,
ವಾಸಃ ಗಾಂಧಿ ನಗರ,
ಚರ್ಚ್ ಎದುರು,
ಭದ್ರಾವತಿ ಟೌನ್,
ಶಿವಮೊಗ್ಗ ಜಿಲ್ಲೆ.

## ದೋಷಾರೋಪಣೆ

**ಶ್ರೀ ವಿನಯ್ ವಿಠ್ಠಲ್ ಕುಂದಾಪುರ್ ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ ಆದ ನಾನು, ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,**

ದಿನಾಂಕಃ 28-04-2012 ರಂದು ಮಧ್ಯಾಹ್ನ 02.00 ಗಂಟೆ ಸಮಯದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು, ಕನಕಪುರ - ಕಬ್ಬಾಳು ರಸ್ತೆ, ಹನುಮನಹಳ್ಳಿ ಗ್ರಾಮದ ಬಳಿ ಇರುವ ಶ್ರೀ ಮುತ್ತುರಾಯಸ್ವಾಮಿ ದೇವಸ್ಥಾನದ ಮುಂದೆ ಆಲದ ಮರದ ಬಳಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ತಮಗಿದ್ದ ಕುಡಿತ, ಬೀಡಿ, ಸಿಗರೇಟು ಸೇದುವ ಹಾಗೂ ಇತರೆ ಕೆಟ್ಟ ಚಟಗಳನ್ನು ತೀರಿಸಿಕೊಳ್ಳಲು ಸುಲಭದಲ್ಲಿ ಹಣ ಗಳಿಸುವ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಮೋಟಾರ್ ಸೈಕಲ್ ನಂ. ಕೆಎ-42-ಜೆ-2484 ರ ಹಿಂಬದಿಯಲ್ಲಿ 2 ಮತ್ತು 3 ನೇ ಆರೋಪಿಗಳನ್ನು ಕೂರಿಸಿಕೊಂಡು ಬಂದು ರಸ್ತೆಯಲ್ಲಿ ನಿಲ್ಲಿಸಿದಾಗ 2 ಮತ್ತು 3 ನೇ ಆರೋಪಿಗಳಾದ ನೀವು ಆಲದ ಮರದ ಕೆಳಗೆ ನಿಂತಿದ್ದ ಚಾಸಾ-1 ರವರ ಹತ್ತಿರಕ್ಕೆ ಬಂದು ಕುಡಿಯುವ ನೀರು ಕೇಳುವ ನೆಪದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ತಬ್ಬಿ ಕೈಗಳನ್ನು ಹಿಡಿದು ಬಾಯಿ ಮುಚ್ಚಿಕೊಂಡಾಗ 3 ನೇ ಆರೋಪಿಯಾದ ನೀವು ಆಕೆಯ ಕುತ್ತಿಗೆಯಲ್ಲಿದ್ದ ಸುಮಾರು 75 ಸಾವಿರ ರೂ ಮೌಲ್ಯದ 21 ಗ್ರಾಂ ತೂಕದ ಚಿನ್ನದ ಚೈನು ಮತ್ತು ಕಿವಿಯಲ್ಲಿದ್ದ 5.5 ಗ್ರಾಂ ತೂಕದ ಚಿನ್ನದ ಓಲೆಗಳನ್ನು ಕಿತ್ತುಕೊಂಡಿರುತ್ತಾರೆ. ಚಾಸಾ-1 ರವರು ಕಿರುಚಿಕೊಂಡಾಗ ಅಲ್ಲೇ ಜಮೀನಿನಲ್ಲಿದ್ದ

ಕೆಲವರು ತಮ್ಮ ಕಡೆ ಬರುವುದನ್ನು ನೋಡಿ 2 ಮತ್ತು 3 ನೇ ಆರೋಪಿಗಳಾದ ನೀವು ಚಿನ್ನದ ಒಡವೆಗಳ ಸಮೇತ ಗುಡ್ಡದ ಕಡೆಗೆ ಓಡಿಹೋಗಿದ್ದು ಮತ್ತು 1 ನೇ ಆರೋಪಿಯಾದ ನೀವು ಅದೇ ಮೋಟಾರ್ ಸೈಕಲ್ ನಲ್ಲಿ ಸ್ಥಳದಿಂದ ಹೊರಟು ಹೋಗಿದ್ದು, ಆ ಮೂಲಕ ಭಾ.ದಂ.ಸ **392** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ ಎಂದು ಹೇಳಲಾಗಿದೆ.

ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯ ವಿಚಾರಣೆಗೆ ಗುರಿಯಾಗುತ್ತಿದ್ದೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

ಸಹಿ/-
**2**ನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ನ್ಯಾಯಾಲಯ, ಕನಕಪುರ.

1. ಪ್ರಶ್ನೆ : ಈಗ ಓದಿ ಹೇಳಿದ ದೋಷಾರೋಪಣಾ ಸಾರಾಂಶ ಅರ್ಥವಾಯಿತೇ ?

ಉತ್ತರಃ 1ನೇ ಆರೋಪಿಃ

2ನೇ ಆರೋಪಿಃ

3ನೇ ಆರೋಪಿಃ

2. ಪ್ರಶ್ನೆ : ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆಯಾಬೇಕೆಂದು ಬಯಸುವಿರಾ ?

ಉತ್ತರಃ 1ನೇ ಆರೋಪಿಃ

2ನೇ ಆರೋಪಿಃ

3ನೇ ಆರೋಪಿಃ

(ಈ ಆರೋಪಣೆಯನ್ನು **ದಿನಾಂಕ 17-01-2026** ರಂದು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ ಅವರಿಂದ ಉತ್ತರ ಪಡೆದು ಉತ್ತರವನ್ನು ದಾಖಲಿಸಿದ್ದೇನೆ.)

ಸಹಿ/-

**2ನೇ ಅಪರ ಸಿವಿಲ್ ಜಡ್ಜ್ ಮತ್ತು**

**ಜೆ.ಎಂ.ಎಫ್.ಸಿ., ನ್ಯಾಯಾಲಯ, ಕನಕಪುರ**

ಆರೋಪಿತರ ಸಹಿಃ

1.

2.

3.